# ನಿಮ್ಮೊಡನೆ

# ಈ ಅಪರಾಧಗಳಿಗೆ ಅಂತ್ಯ ಎಂದು?

ವರದಕ್ಷಿಣೆ ಸಾವು, ಲೈಂಗಿಕ ಕಿರುಕುಳ, ಹೆಣ್ಣು ಭ್ರೂಣ ಹತ್ಯೆ, ಅತ್ಯಾಚಾರ, ಆಸಿಡ್ ದಾಳಿ– ಹೀಗೆ ನಾಗರಿಕ ಸಮಾಜದಲ್ಲಿ ಮಹಿಳೆ ವಿರುದ್ಧದ ಹಿಂಸೆ ಪಡೆದುಕೊಳ್ಳುತ್ತಿರುವ ಸ್ವರೂಪಗಳು, ಆಯಾಮಗಳು ಆತಂಕಕಾರಿ. ಮನೆಯೊಳಗೂ ಆಕೆ ಸುರಕ್ಷಿತಳಲ್ಲ ಎಂಬುದನ್ನು ಇದು ಸಾರಿ ಹೇಳುತ್ತಿದೆ. ಕೌಟುಂಬಿಕ ಹಿಂಸೆ ಎಂಬುದು ಅತ್ಯಂತ ವಿವಾದಾತ್ಮಕವಾದ ಸಂಕೀರ್ಣ ವಿಚಾರ. ತನ್ನವರು ಎನ್ನಿಸಿಕೊಂಡವರೊಡನೆಯೇ ಅನುಭವಿಸಬೇಕಾದ ಕಿರುಕುಳ, ಹಿಂಸೆಗಳ ಸ್ವರೂಪಗಳಿಗೆ ಅಭಿವ್ಯಕ್ತಿ ನೀಡುವುದೂ  ಕ್ಲಿಷ್ಟಕರ. ಮಹಿಳೆ ವಿರುದ್ಧದ ಈ ಅಪರಾಧಗಳು ದಿನನಿತ್ಯದ  ಮಾಮೂಲಿ ಸಂಗತಿಗಳಾಗಿ ಯಾವುದೇ ಭಾವನೆಗಳನ್ನೂ ಉಂಟು ಮಾಡದಂತಹ ಸಂವೇದನಾರಾಹಿತ್ಯತೆ ಸೃಷ್ಟಿ ಮಾಡುತ್ತಿರುವುದಂತೂ ಮತ್ತೂ ಆತಂಕಕಾರಿ. ಈ ವಿಷಯವನ್ನು ಇದೀಗ ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಮಹಿಳೆಯರ ಸುರಕ್ಷತೆಗಾಗಿ ಜಾರಿಯಾಗಿರುವ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಕೇಂದ್ರ ಗೃಹ ಸಚಿವಾಲಯ ನಿರ್ದೇಶನ ನೀಡಿದೆ.

ಮಹಿಳೆ ವಿರುದ್ಧದ ಅಪರಾಧ ಪ್ರಕರಣಗಳಲ್ಲಿ ಅಪರಾಧದ ದಿನಾಂಕದ ನಂತರ ಮೂರು ತಿಂಗಳ ಒಳಗೇ ಆರೋಪಪಟ್ಟಿ ಸಲ್ಲಿಸಬೇಕು. ಆದರೆ ತನಿಖೆಯ ಗುಣಮಟ್ಟದಲ್ಲಿ ಯಾವುದೇ ರಾಜಿಯೂ ಇರಬಾರದು ಎಂದು ಈಗ ಕೇಂದ್ರ ರಾಜ್ಯ ಸರ್ಕಾರಗಳಿಗೆ ಎಚ್ಚರಿಸಿದೆ.

ನ್ಯಾಯ ಅರಸಿ ಪೊಲೀಸ್ ಠಾಣೆಗೆ ಬರುವ ಹಿಂಸೆಗೊಳಪಟ್ಟ ಮಹಿಳೆಯರಿಗೆ ಎದುರಾಗುವುದು ಅವಮಾನ ಎಂಬುದು ಸಾಮಾನ್ಯ ಅನುಭವ. ಸಹಾನುಭೂತಿ, ಸಂವೇದನಾಶೀಲತೆ ಇಲ್ಲದ ಪೊಲೀಸರು ಎಫ್‌ಐಆರ್ ದಾಖಲಿಸುವುದೂ ಅಪರೂಪ. ಈ ಬಗ್ಗೆ ಅಪಾರ ದೂರುಗಳು ಇದ್ದೇ ಇವೆ. ಈ ಹಿನ್ನೆಲೆಯಲ್ಲೇ ಮಹಿಳೆಯರ ಸುರಕ್ಷೆಗಾಗಿ ರಾಜ್ಯ ಸರ್ಕಾರಗಳು ಕೈಗೊಳ್ಳಬೇಕಾಗಿರುವ 31 ತುರ್ತು ಕ್ರಮಗಳನ್ನು ಈಗ ಕೇಂದ್ರ ಸರ್ಕಾರ ಪಟ್ಟಿ ಮಾಡಿದೆ. ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳಲ್ಲಿ ಎಫ್‌ಐಆರ್‌ಗಳ ಕಡ್ಡಾಯ ದಾಖಲಾತಿ ಹಾಗೂ ಎಫ್‌ಐಆರ್‌ನಲ್ಲಿ ಹೆಸರಿಸಿದ ಆರೋಪಿಗಳ ಬಂಧನ ಇದರಲ್ಲಿ ಸೇರಿದೆ.

ರಾಷ್ಟ್ರದ ಉತ್ತರ ಭಾಗದ ರಾಜ್ಯಗಳಲ್ಲಿ ವ್ಯಾಪಕವಾಗುತ್ತಿರುವ 'ಮರ್ಯಾದಾ ಹತ್ಯೆ'ಗಳ ಮೂಲಕ ಮಹಿಳಾ ಹಕ್ಕುಗಳನ್ನೇ ಉಲ್ಲಂಘಿಸುತ್ತಿರುವ ಪ್ರಕರಣಗಳಿಗೆ ತಡೆ ಹಾಕಲು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಸಲಹೆಯನ್ನೂ ನೀಡಲಾಗಿದೆ. ಹೆಚ್ಚುತ್ತಿರುವ ಮಾನವ ಸಾಗಣೆ ವಿರುದ್ಧ ಕ್ರಮಗಳನ್ನು ತೀವ್ರಗೊಳಿಸಲೂ ಸಲಹೆ ನೀಡಲಾಗಿದೆ. ಜಾಗತೀಕರಣದ ನಂತರ ನಮ್ಮ ಬದುಕನ್ನು ಆವರಿಸಿಕೊಳ್ಳುತ್ತಿರುವ ಸರಕು ಸಂಸ್ಕೃತಿ, ಹೆಚ್ಚುತ್ತಿರುವ ವರದಕ್ಷಿಣೆಯ ಬೇಡಿಕೆಗಳು  ಹೆಣ್ಣಿನ ಬದುಕನ್ನು ಮತ್ತಷ್ಟು ಅಪಮೌಲ್ಯಗೊಳಿಸಿದೆ. ಹೆಣ್ಣು ಹುಟ್ಟುವ ಹಕ್ಕನ್ನೂ ಕಳೆದುಕೊಳ್ಳುತ್ತಿದ್ದಾಳೆ. ಗರ್ಭದೊಳಗೇ ಹೆಣ್ಣು ಭ್ರೂಣವನ್ನು ಹೊಸಕಿ ಹಾಕುವ ಕ್ರಮಗಳಿಂದ ಗಂಡುಮಕ್ಕಳು ಹಾಗೂ ಹೆಣ್ಣುಮಕ್ಕಳ ಅನುಪಾತದಲ್ಲಿ ತೀವ್ರ ಏರುಪೇರುಗಳು ಕಂಡು ಬರುತ್ತಿರುವುದು ಈಗ ಹೆಚ್ಚಿನ ಆತಂಕಕ್ಕೆ ಕಾರಣವಾಗಿದೆ.

ಇದೇ ಸಂದರ್ಭದಲ್ಲೇ ರಾಜ್ಯ ಸರ್ಕಾರ 'ಎರಡು ಮಕ್ಕಳ ಜನಸಂಖ್ಯಾ ನೀತಿ' ಜಾರಿಗೆ ತರುವ ಚರ್ಚೆಗೆ ಚಾಲನೆ ನೀಡಿದೆ.  ಆದರೆ ಇಂತಹ ನೀತಿ ಮತ್ತಷ್ಟು ಹೆಣ್ಣು ಭ್ರೂಣ ಹತ್ಯೆಗಳಿಗೆ ಕಾರಣವಾಗಬಹುದು ಎಂಬಂತಹ ಚರ್ಚೆಗಳು ಈ ಹಿಂದೆಯೇ ಸಾಕಷ್ಟು ನಡೆದಿವೆ. ತಂತ್ರಜ್ಞಾನದ ಬೆಳವಣಿಗೆಯ ಜೊತೆಗೇ ಆಧುನಿಕ ಸಮಾಜದ ದೊಡ್ಡ ಪಿಡುಗಾಗಿ ಬೆಳೆದಿರುವ ಹೆಣ್ಣು ಭ್ರೂಣ ಹತ್ಯೆ ತಡೆಗೆ ಆರೋಗ್ಯ ಇಲಾಖೆಯೊಂದಿಗೆ ರಾಜ್ಯ ಪೊಲೀಸರು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ನಿರ್ದೇಶನವನ್ನು ಕೇಂದ್ರ ಸರ್ಕಾರ ಈಗ ನೀಡಿದೆ.

ಮಹಿಳೆಯರ ವಿರುದ್ಧದ ಅಪರಾಧಗಳನ್ನು ನಿಯಂತ್ರಿಸಲು ಸಂವೇದನಾಶೀಲ ಆಡಳಿತ ಯಂತ್ರದ ಅಗತ್ಯವಿದೆ. ಈ ಹಿನ್ನೆಲೆಯಲ್ಲೇ ಪೊಲೀಸ್ ವ್ಯವಸ್ಥೆಯಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿಸಬೇಕೆಂಬ ಸಲಹೆಯನ್ನೂ ನೀಡಲಾಗಿದೆ.  ಪೊಲೀಸ್ ಪಡೆಯಲ್ಲಿ ಎಲ್ಲಾ ಮಟ್ಟಗಳಲ್ಲೂ ಮಹಿಳೆಯರ ಒಟ್ಟಾರೆ ಪ್ರಾತಿನಿಧ್ಯ ಶೇ.33ರಷ್ಟಿರಬೇಕು ಎಂಬಂತಹ ನಿರ್ದೇಶನ ನೀಡಲಾಗಿದೆ. ಜೊತೆಗೆ ಪ್ರಕರಣಗಳ ಶೀಘ್ರ ವಿಚಾರಣೆಗೆ ಕುಟುಂಬ ನ್ಯಾಯಾಲಯಗಳ ಸ್ಥಾಪನೆಗೂ ಕರೆ ನೀಡಲಾಗಿದೆ.

ಕಳೆದ ಮೂರು ದಶಕಗಳಲ್ಲಿ ಮಹಿಳಾ ಹಕ್ಕುಗಳ ಬಗ್ಗೆ ಜಾಗೃತಿ ಹೆಚ್ಚಿರುವುದು ವಾಸ್ತವ. ಸರ್ಕಾರದ ಮಟ್ಟದಲ್ಲೂ ಸಾಕಷ್ಟು ನೀತಿಗಳು ಜಾರಿಯಾಗಿವೆ. ಹೀಗಿದ್ದೂ ಮಹಿಳೆ ವಿರುದ್ಧದ ಹಿಂಸಾಚಾರಗಳ ಹೆಚ್ಚಳಕ್ಕೆ  ಬದಲಾಗದ ಮನಸ್ಥಿತಿ ಹಾಗೂ ನಮ್ಮ ಅಭಿವೃದ್ಧಿಯ ವಿಕೃತ ಮಾದರಿಗಳಲ್ಲಿ ಕಾರಣಗಳನ್ನು ಹುಡುಕಬೇಕಿದೆ. ಮಹಿಳೆಯನ್ನು ವ್ಯಕ್ತಿಯಾಗಿ ಗೌರವಿಸುವ, ಆಕೆಯ ವಿರುದ್ಧದ ಅಪರಾಧ ಸಾಧ್ಯವೇ ಆಗದ ಸಮಾಜ ನಿರ್ಮಾಣಕ್ಕೆ ಬಹು ನೆಲೆಗಳಲ್ಲಿ ಪ್ರಯತ್ನಗಳು ಮುಂದುವರಿಯಬೇಕಿದೆ.

■ ಸಿ. ಜಿ. ಮಂಜುಳಾ

**ಮಹಿಳೆಯರ ಸುರಕ್ಷತೆಗಾಗಿ ಜಾರಿಯಾಗಿರುವ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಕೇಂದ್ರ ಗೃಹ ಸಚಿವಾಲಯ ನಿರ್ದೇಶನ ನೀಡಿದೆ. ಮಹಿಳೆ ವಿರುದ್ಧದ ಅಪರಾಧ ಪ್ರಕರಣಗಳಲ್ಲಿ ಅಪರಾಧದ ದಿನಾಂಕದ ನಂತರ ಮೂರು ತಿಂಗಳ ಒಳಗೇ ಆರೋಪಪಟ್ಟಿ ಸಲ್ಲಿಸಬೇಕು ಎಂದೂ ಕಟ್ಟುನಿಟ್ಟಾಗಿ ಆದೇಶಿಸಲಾಗಿದೆ.**



ಶಿಲ್ಪಾ ಕಬ್ಬಿಣಕಂತಿ